ಹನುಮಂತೇ ಗೌಡನಪಾಳ್ಯ ಚಿಕ್ಕಮಾರನಹಳ್ಳಿ ನಡುವೆ ಕುಮುದ್ವತಿ ನದಿಗೆ ಅಡ್ಡಲಾಗಿ ಬರುವ ಸೇತುವೆಯ ಕಾಮಗಾರಿಯನ್ನು ಆಯ-ವ್ಯಯದಲ್ಲಿ ಹಣದ ಲಭ್ಯತೆಯನ್ನು ಅನುಸರಿಸಿ ಮುಂದಿನ ಕ್ರಮ ತೆಗೆದುಕೊಳ್ಳಲು ಪರಿಶೀಲಿಸಲಾಗುತ್ತಿದೆ.

## ನೆಲಮಂಗಲ ತಾಲ್ಲೂಕಿನಲ್ಲಿ ಮೇಲ್ದರ್ಜೆಗೇರಿಸಿದ ರಸ್ತೆಗಳ ದುಸ್ಥಿತಿ

**1214 (529):** ಶ್ರೀ ಅಂಜನಮೂರ್ತಿ (ನೆಲಮಂಗಲ):-

ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) 1991-92ನೇ ಸಾಲಿನಲ್ಲಿ ನೆಲಮಂಗಲ ತಾಲ್ಲೂಕಿನಲ್ಲಿ ಮೇಲ್ದರ್ಜೆಗೇರಿಸಿದ ರಸ್ತೆಗಳು ಸಂಚಾರಕ್ಕೆ ಯೋಗ್ಯವಾಗಿಲ್ಲದಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ರಸ್ತೆಗಳನ್ನು ಅಭಿವೃದ್ಧಿಪಡಿಸದಿರಲು ಕಾರಣಗಳೇನು;

ಇ) ಈ ಬಗ್ಗೆ ಸರ್ಕಾರದವರು ಕೂಡಲೇ ಕ್ರಮ ಕೈಗೊಳ್ಳುವರೇ ?

ಶ್ರೀ ಕೆ. ಹೆಚ್. ರಂಗನಾಥ್ (ಲೋಕೋಪಯೋಗಿ ಸಚಿವರು):-

ಅ) ಇತ್ತೀಚೆಗೆ ಮೇಲ್ದರ್ಜೆಗೇರಿಸಿದ ರಸ್ತೆಗಳು ಕೆಟ್ಟಿರುವುದು ಸರ್ಕಾರದ ಗಮನಕ್ಕೆ ಬಂದಿದೆ.

ಆ) 1992-93ನೇ ಸಾಲಿನಲ್ಲಿ ಮೇಲ್ದರ್ಜೆಗೇರಿಸಿದ ರಸ್ತೆಗಳ ಅಭಿವೃದ್ಧಿಗಾಗಿ ಅನುದಾನ ಲಭ್ಯತೆ ಇರಲಿಲ್ಲ. ಈ ರಸ್ತೆಗಳ ಅಭಿವೃದ್ಧಿಯನ್ನು ಅನುದಾನದ ಲಭ್ಯತೆ ಅನುಸರಿಸಿ ಹಂತಹಂತವಾಗಿ 1993-94ನೇ ಸಾಲಿನಿಂದ ತೆಗೆದುಕೊಳ್ಳಲಾಗುವುದು.

ಇ) ಅತ್ಯಂತ ಕೆಟ್ಟುಹೋದ ಭಾಗಗಳನ್ನು ಲಭ್ಯವಿದ್ದ ನಿರ್ವಹಣಾ ಅನುದಾನದಲ್ಲಿ ಸಾಧ್ಯವಾದಷ್ಟು ಮಟ್ಟಿಗೆ ದುರಸ್ತಿಪಡಿಸಲಾಗುತ್ತಿದೆ.

## ಕೇಂದ್ರದಿಂದ ಮಂಜೂರಾತಿಯಾಗಿರುವ ರಾಜ್ಯದ ರಾಷ್ಟ್ರೀಯ ಹೆದ್ದಾರಿಗಳು

**1217 (50):** ಶ್ರೀ ಹರ್ಷಕುಮಾರಗೌಡ (ಚಾಮರಾಜ):-

ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಈವರೆಗೆ ಕೇಂದ್ರದಿಂದ ರಾಜ್ಯಕ್ಕೆ ಮಂಜೂರಾಗಿರುವ ರಾಷ್ಟ್ರೀಯ ಹೆದ್ದಾರಿಗಳೆಷ್ಟು ಮತ್ತು ಅವುಗಳ ಹೆಸರೇನು;

ಆ) ರಾಜ್ಯ ಸರ್ಕಾರದಿಂದ ಕೋರಿಕೆ ಸಲ್ಲಿಸಲಾಗಿರುವ ನೂತನ ರಾಷ್ಟ್ರೀಯ ಹೆದ್ದಾರಿಗಳ ಹೆಸರುಗಳೇನು;

ಇ) ಅವುಗಳ ಕಾರ್ಯ ಈಗ ಯಾವ ಹಂತದಲ್ಲಿದೆ ?

ಶ್ರೀ ಕೆ. ಹೆಚ್. ರಂಗನಾಥ್ (ಲೋಕೋಪಯೋಗಿ ಸಚಿವರು):-

ಅ) ಕರ್ನಾಟಕ ರಾಜ್ಯದಲ್ಲಿ 7 ರಾಷ್ಟ್ರೀಯ ಹೆದ್ದಾರಿಗಳು ಹಾದು ಹೋಗುತ್ತವೆ. ಇವುಗಳ ಹೆಸರಿನ ಪಟ್ಟಿಯನ್ನು (ಅಡಕ - 1) ಲಗತ್ತಿಸಲಾಗಿದೆ.

ಆ) ಪಟ್ಟಿಯನ್ನು (ಅಡಕ - 2) ಲಗತ್ತಿಸಲಾಗಿದೆ.

೩) ಪ್ರಸ್ತಾವನೆಗಳು ಇನ್ನೂ ಕೇಂದ್ರ ಸರ್ಕಾರದ ಪರಿಶೀಲನೆಯಲ್ಲಿದೆ. ಆದ್ದರಿಂದ ಇವುಗಳ ಕೆಲಸವನ್ನು ಇನ್ನೂ ಕೈಗೆತ್ತಿಕೊಂಡಿರುವುದಿಲ್ಲ.

## ಅಡಕ -1

## ಕರ್ನಾಟಕ ರಾಜ್ಯದಲ್ಲಿ ಹಾದುಹೋಗುವ ರಾಷ್ಟ್ರೀಯ ಹೆದ್ದಾರಿಗಳ ಪಟ್ಟಿ

| | | ಕಿ.ಮೀ. |
|---|---|---|
| 1. ರಾಷ್ಟ್ರೀಯ ಹೆದ್ದಾರಿ ನಂ. 4 | ತಮಿಳುನಾಡು – ಕೋಲಾರ – ಬೆಂಗಳೂರು ಹುಬ್ಬಳ್ಳಿ – ಬೆಳಗಾಂ – ಪೂನಾ – ಬಾಂಬೆ | 700 |
| 2. ರಾಷ್ಟ್ರೀಯ ಹೆದ್ದಾರಿ ನಂ. 4ಎ | ಬೆಳಗಾಂ – ಖಾನಾಪುರ – ಅನ್‌ಮೋದ್ – ಪಣಜಿ | 84 |
| 3. ರಾಷ್ಟ್ರೀಯ ಹೆದ್ದಾರಿ ನಂ. 7 | ಬೆನಾರಸ್ – ನಾಗಪುರ – ಹೈದರಾಬಾದ್ – ಕರ್ನೂಲ್ – ಬಾಗೇಪಲ್ಲಿ – ಬೆಂಗಳೂರು – ಹೊಸೂರು – ಕೃಷ್ಣಗಿರಿ – ತಮಿಳುನಾಡು – ಕೇಪ್ ಕ್ಯಾಮರಿನ್ | 128 |
| 4. ರಾಷ್ಟ್ರೀಯ ಹೆದ್ದಾರಿ ನಂ. 9 | ಪೂನಾ – ಸೋಲಾಪುರ – ಹುಮ್ನಾಬಾದ್ – ಹೈದರಾಬಾದ್ – ವಿಜಯವಾಡ | 75 |
| 5. ರಾಷ್ಟ್ರೀಯ ಹೆದ್ದಾರಿ ನಂ. 13 | ಚಿತ್ರದುರ್ಗ – ಹೊಸಪೇಟೆ – ಬಿಜಾಪುರ – ಸೋಲಾಪುರ | 390 |
| 6. ರಾಷ್ಟ್ರೀಯ ಹೆದ್ದಾರಿ ನಂ. 17 | ಪಣವೆಲ್ – ಪಣಜಿ – ಕಾರವಾರ – ಕುಂದಾಪುರ – ಉಡುಪಿ – ಮಂಗಳೂರು – ಕಣ್ಣಾನೂರು – ತಿರುಚೂರ್ | 300 |
| 7. ರಾಷ್ಟ್ರೀಯ ಹೆದ್ದಾರಿ ನಂ. 48 | ಬೆಂಗಳೂರು – ನೆಲಮಂಗಲ – ಕುಣಿಗಲ್ – ಹಾಸನ – ಸಕಲೇಶಪುರ – ಮಂಗಳೂರು | 320 |
| | ಒಟ್ಟು ಉದ್ದ | 1,997 |
| | | ಕಿ.ಮೀ. |

## ಅಡಕ - 2

| ಕ್ರ. ಸಂ. | ರಾಷ್ಟ್ರೀಯ ಹೆದ್ದಾರಿಯಾಗಿ ಘೋಷಿಸುವಂತೆ ಕೋರಿರುವ ರಾಜ್ಯ ಹೆದ್ದಾರಿಗಳು | ಉದ್ದ (ಕಿ.ಮೀ.) |
|---|---|---|
| 1. | ಆಂಧ್ರಪ್ರದೇಶದ ಗೂಟಿಯಿಂದ ಗುಂಟಕಲ್, ಬಳ್ಳಾರಿ – ಹೊಸಪೇಟೆ – ಕೊಪ್ಪಳ – ಗದಗ್ – ಹುಬ್ಬಳ್ಳಿ – ಕಾರವಾರ (ಇವುಗಳನ್ನು ಸೇರುವ ರಾಷ್ಟ್ರೀಯ ಹೆದ್ದಾರಿ ನಂ. 17) | 422 |
| 2. | ಬೆಂಗಳೂರು – ಮೈಸೂರು – ನಂಜನಗೂಡು – ಗುಂಡ್ಲುಪೇಟೆ – ಊಟಿ – ಕೊಯಮತ್ತೂರು (ರಾಷ್ಟ್ರೀಯ ಹೆದ್ದಾರಿ ಸಂಖ್ಯೆ: 47ನ್ನು ತಮಿಳುನಾಡಿನಲ್ಲಿ ಸೇರುವಂತೆ) | 220 |
| 3. | ಮೈಸೂರು – ಶ್ರೀರಂಗಪಟ್ಟಣ – ನಾಗಮಂಗಲ – ಚಿಕ್ಕನಾಯಕನ ಹಳ್ಳಿ – ಹುಳಿಯಾರ್ – ಹಿರಿಯೂರ್ – ಬಳ್ಳಾರಿ – ಗುಲ್ಬರ್ಗಾ – ಹುಮ್ನಾಬಾದ್ (ರಾಷ್ಟ್ರೀಯ ಹೆದ್ದಾರಿ 9ನ್ನು ಸೇರುವಂತೆ) | 678 |

| | | |
|---|---|---|
| 4. | ತುಮಕೂರು–ಅರಸೀಕೆರೆ –ಶಿವಮೊಗ್ಗ–ಸಾಗರ–ಹೊನ್ನಾವರ– (ರಾಷ್ಟ್ರೀಯ ಹೆದ್ದಾರಿ 17ರಲ್ಲಿ ಸೇರುವಂತೆ) | 332 |
| 5. | ಬೆಂಗಳೂರು–ಮೈಸೂರು– ಮಡಿಕೇರಿ–ಮಂಗಳೂರು (ರಾಷ್ಟ್ರೀಯ ಹೆದ್ದಾರಿ 17ರಲ್ಲಿ ಸೇರುವಂತೆ) | 385 |
| 6. | ಬೆಳಗಾಂ –ಬಿಜಾಪುರ – ಗುಲ್ಬರ್ಗಾ–ಹುಮ್ನಾಬಾದ್ (ರಾಷ್ಟ್ರೀಯ ಹೆದ್ದಾರಿ 9ನ್ನು ಸೇರುವಂತೆ) | 364 |
| 7. | ಬೆಳಗಾಂ–ಬಾಗಲ್‌ಕೋಟ್–ರಾಯಚೂರು– ಮೆಹಬೂಬ್‌ನಗರ (ಆಂಧ್ರಪ್ರದೇಶದಲ್ಲಿ) | 336 |
| 8. | ಚಿತ್ರದುರ್ಗ– ಹೊಳಲ್ಕೆರೆ – ಹೊಸದುರ್ಗ–ಚಿಕ್ಕಮಗಳೂರು– ಮೂಡಿಗೆರೆ– ಬೆಳ್ತಂಗಡಿ– ಬಂಟ್ವಾಳ– ಮಂಗಳೂರು (ರಾಷ್ಟ್ರೀಯ ಹೆದ್ದಾರಿ 17ರಲ್ಲಿ ಸೇರುವಂತೆ) | 283 |
| 9. | ಧಾರವಾಡ – ಲೋಂಡಾ–ಅನ್‌ಮೋದ್ – ಪಣಜಿ (ರಾಷ್ಟ್ರೀಯ ಹೆದ್ದಾರಿ 17ರಲ್ಲಿ ಸೇರುವಂತೆ) | 95 |
| 10. | ಪಡುಬಿದ್ರಿ – ಕಾರ್ಕಳ–ಶೃಂಗೇರಿ–ತೀರ್ಥಹಳ್ಳಿ– ಶಿಕಾರಿಪುರ–ಶಿರಾಳ್‌ಕೊಪ್ಪ–ಹುಬ್ಬಳ್ಳಿ– ಬಾಗಲ್‌ಕೋಟ್– ಹುನಗುಂದ | 550 |
| 11. | ಶಿರಾ– (ಬೆಂಗಳೂರು – ಪೂನಾ ರಾಷ್ಟ್ರೀಯ ಹೆದ್ದಾರಿ ನಂ.4) ಮಧುಗಿರಿ– ಗೌರಿಬಿದನೂರ್– ಚಿಕ್ಕಬಳ್ಳಾಪುರ– ಚಿಂತಾಮಣಿ– ಶ್ರೀನಿವಾಸಪುರ– ಮುಳಬಾಗಿಲು (ಬೆಂಗಳೂರು – ಮದ್ರಾಸ್ ರಾಷ್ಟ್ರೀಯ ಹೆದ್ದಾರಿ ನಂ.4) | 160 |
| 12. | ಚಿತ್ರದುರ್ಗ– ಶಿವಮೊಗ್ಗ– ಸಕಲೇಶಪುರ– ಮಡಿಕೇರಿ ಹಾಗೂ ಕೇರಳದಲ್ಲಿರುವ ತಲ್ಲಿಚೇರಿ | 325 |
| 13. | ಬೆಂಗಳೂರು– ಕನಕಪುರ– ಮಳವಳ್ಳಿ– ಮೈಸೂರು– ನಂಜನಗೂಡು– ಸುಲ್ತಾನ್‌ಬತ್ತೇರಿ ಹಾಗೂ ಕೇರಳದಲ್ಲಿರುವ ಕಲ್ಲಿಕೋಟೆ | 250 |
| | ಒಟ್ಟು ಉದ್ದ | 4400 ಕಿ.ಮೀ. |

## ಹಿಡಕಲ್ ಅಣೆಕಟ್ಟಿನ ಉಪನಾಲೆಗಳು ಪೂರ್ಣಗೊಳ್ಳದಿರುವುದು

**1218 (235):** ಶ್ರೀ ಎಸ್.ಎಸ್. ಭೀಮಣ್ಣ **(ಚಿಕ್ಕೋಡಿ):**–

ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬೆಳಗಾಂ ಜಿಲ್ಲೆಯಲ್ಲಿರುವ ಹಿಡಕಲ್ ಅಣೆಕಟ್ಟನ್ನು **ಕಟ್ಟಿ** 20 ವರ್ಷ **ಕಳೆದರೂ** ಅದರ ಉಪನಾಲೆಗಳು ಇನ್ನೂ ಪೂರ್ಣಗೊಂಡಿಲ್ಲದಿರುವುದು **ಸರ್ಕಾರದವರ** ಗಮನಕ್ಕೆ ಬಂದಿದೆಯೆ;

ಆ) ಬಂದಿದ್ದಲ್ಲಿ, ಈ ಉಪನಾಲೆಗಳ ನಿರ್ಮಾಣ **ಕಾರ್ಯಗಳನ್ನು** ಎಷ್ಟು **ಅವಧಿಯೊಳಗೆ** ಪೂರ್ಣಗೊಳಿಸಲಾಗುವುದು ?

ಶ್ರೀ ಎಸ್. ಎಂ. ಕೃಷ್ಣ (ಉಪಮುಖ್ಯಮಂತ್ರಿಗಳು):–

ಅ) ಹೌದು.